# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 138 |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ ರಾಥೋಡ್. ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 14.02.2024 |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| **(ಅ)** ಸರ್ಕಾರವು ವಿಜಯಪುರ ಜಿಲ್ಲೆಯಲ್ಲಿ ಬರಪರಿಹಾರಕ್ಕಾಗಿ ಯಾವ-ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು) | • 2023-24 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳನ್ನು ತೀವ್ರ ಬರಪೀಡಿತ ತಾಲೂಕುಗಳೆಂದು ಘೋಷಿಸಿ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ತಾಲ್ಲೂಕು ನೋಡಲ್ ಅಧಿಕಾರಿಗಳೆಂದು ನೇಮಿಸಲಾಗಿರುತ್ತದೆ. ಪ್ರಸ್ತುತ ಜಿಲ್ಲೆಯಲ್ಲಿ ಇಂಡಿ, ಚಡಚಣ ತಿಕೋಟಾ, ತಾಳಿಕೋಟೆ ಮತ್ತು ದೇವರಹಿಪ್ಪರಗಿ ತಾಲೂಕುಗಳಲ್ಲಿ ಹಾಗೂ 14 ಗ್ರಾಮ ಪಂಚಾಯತಿ, 23 ಗ್ರಾಮಗಳಲ್ಲಿ 36 ಟ್ಯಾಂಕರ್‌ಗಳ ಮೂಲಕ ಪ್ರತಿದಿನ 74 ಟ್ರಿಪ್‌ನಂತೆ, ಹಾಗೂ 7 ಗ್ರಾಮಗಳಲ್ಲಿ ಖಾಸಗಿ ಕೊಳವೆ ಬಾವಿ ಮುಖಾಂತರ ನೀರು ಸರಬರಾಜು ಮಾಡಲಾಗುತ್ತಿದೆ.<br><br>• ಆಲಮಟ್ಟಿ ಹಾಗೂ ನಾರಾಯಣಪುರ ಜಲಾಶಯಗಳಿಂದ ಕಾಲುವೆಗಳಿಗೆ ನೀರು ಹರಿಸುವ ಮೂಲಕ ಕೆರೆ-ತೊಟ್ಟಿಗಳನ್ನು ತುಂಬಿಸುವ ಸಲುವಾಗಿ ಈಗಾಗಲೇ ಕ್ರಮವಹಿಸಲಾಗಿದೆ.<br><br>• ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪೀಡಿತ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಸಾಗಾಣಿಕೆ ಕುರಿತು ಈಗಾಗಲೇ ಜಿಲ್ಲೆಯ ಎಲ್ಲ ತಹಶೀಲ್ದಾರರು ಟೆಂಡರ್‌ನ್ನು ಕರೆಯಲಾಗಿದ್ದು, ಆ ಪೈಕಿ 10 ತಾಲೂಕುಗಳಲ್ಲಿಅಂತಿಮಗೊಳಿಸಲಾಗಿದ್ದು, ಬಾಕಿ ಉಳಿದ ತಾಲೂಕುಗಳಾದ ನಿಡಗುಂದಿ, ತಾಳಿಕೋಟೆ, ಮತ್ತು ಆಲಮೇಲ ತಾಲೂಕಿನಲ್ಲಿ ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದೆ.<br><br>• ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಬಹುದಾದ ಒಟ್ಟು 243 ಗ್ರಾಮಗಳನ್ನು ಹಾಗೂ 26 ವಾರ್ಡ್‌ಗಳನ್ನು ಗುರುತಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಒಟ್ಟು 23 ಖಾಸಗಿ ಬೋರ್‌ವೆಲ್‌ಗಳನ್ನು ಗುರುತಿಸಿದ್ದು, ಬೋರ್‌ವೆಲ್‌ಗಳ ಮಾಲೀಕರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗುವುದು. |

| | |
|---|---|
| | • ಜಿಲ್ಲೆಯಲ್ಲಿ ಒಟ್ಟು 4,98,997.25 ಹೇ ಬೆಳೆ ಹಾನಿಯಾದ SDRF ಮಾರ್ಗ ಸೂಚಿಗಳ ಪ್ರಕಾರ ಅರ್ಹ ರೈತರಿಗೆ FRUITS ತಂತ್ರಾಂಶದ ಮೂಲಕ ಗರಿಷ್ಠ ರೂ.2,000/-ವರೆಗೆ ಮೊದಲನೆ ಕಂತಾಗಿ / ಬೆಳೆ ಹಾನಿ ಪರಿಹಾರವಾಗಿ ರೈತರ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಬೆಳೆ ಹಾನಿ ಪರಿಹಾರ ಜಮೆ ಮಾಡಲಾಗುತ್ತಿದ್ದು, ದಿನಾಂಕ:12-02-2024ರ ವರೆ ಒಟ್ಟು 2,52,169 ರೈತರಿಗೆ ರೂ. 50.28 ಕೋಟಿ ಮೊತ್ತವನ್ನು ಜಮೆ ಮಾಡಲಾಗಿದೆ. |
| | • Mid Season Adversity ಅಡಿಯಲ್ಲಿ ವಿಜಯಪುರ ಜಿಲ್ಲೆಯ 209 ಗ್ರಾಮ ಪಂಚಾಯತಿಗಳಲ್ಲಿ ತೊಗರಿ ಬೆಳೆ (ಮಳೆಯಾಶ್ರಿತ) ವಿಮೆ ತುಂಬಿದ 69,859 ರೈತರಿಗೆ ವಿಮಾ ಮೊತ್ತದ ಶೇ. 25% ಹಣ ಮಂಜೂರು ಮಾಡಲು ಆದೇಶ ಹೊರಡಿಸಲಾಗಿದೆ.<br><br>• ಜಿಲ್ಲೆಯ 1 5 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೀರಿನ ಕೊರತೆ ಇಲ್ಲಿಯವರೆಗೆ ಆಗಿರುವುದಿಲ್ಲ.<br><br>• ಆದೇಶ ಸಂಖ್ಯೆ: ಕಂಇ 497 ಟಿಎನ್‌ಆರ್ 2023 ದಿನಾಂಕ:22-11-2023 ರ ಮೇರೆಗೆ ಜಿಲ್ಲೆಯ ಮೇವು ಅಂತರರಾಜ್ಯ ಹೋಗದಂತೆ ತಡೆಗಟ್ಟಲು ಆದೇಶಿಸಲಾಗಿರುತ್ತದೆ.<br><br>• ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ತಾಲೂಕಾವಾರು ಮೇವು ಖರೀದಿಗಾಗಿ ಟೆಂಡರ್ ಪ್ರಕ್ರಿಯೆಯನ್ನು ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಅಧಿಕೃತ ಜ್ಞಾಪನ ಹೊರಡಿಸಲಾಗಿದೆ.<br><br>• ಜಿಲ್ಲೆಯಲ್ಲಿ 3,79,190 ಜಾನುವಾರುಗಳಿದ್ದು, ಮೇವು ಇನ್ನು 1 6 ವಾರಗಳಿಗಾಗುವಷ್ಟು ಲಭ್ಯವಿದೆ.<br><br>• ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ರೂ.33.70 ಕೋಟಿ ಹಾಗೂ ತಹಶೀಲ್ದಾರರ ಪಿ.ಡಿ. ಖಾತೆಯಲ್ಲಿ ರೂ.4.57 ಕೋಟಿ ಸೇರಿದಂತೆ ಒಟ್ಟು ರೂ. 38.27 ಕೋಟಿ ಬರ ನಿರ್ವಹಣೆಗಾಗಿ ಅನುದಾನ ಲಭ್ಯವಿರುತ್ತದೆ. |

| | |
|---|---|
| | • ಪ್ರತಿ ವಾರಕ್ಕೊಮ್ಮೆ ಬರ ಪರಿಸ್ಥಿತಿ ನಿರ್ವಹಣೆ ಕುರಿತು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ ಮತ್ತು ಶಾಸಕರ ಅಧ್ಯಕ್ಷತೆಯಲ್ಲಿ ದಿನಾಂಕ:10-02-2024ರ ವರೆಗೆ 14 ತಾಲ್ಲೂಕು ಟಾಸ್ಕ್‌ಫೋರ್ಸ್ ಸಭೆಗಳನ್ನು ನಡೆಸಿ ಮೇಲ್ವಿಚಾರಣೆ ಮಾಡಲಾಗುತ್ತಿದ್ದು, ಸಂಬಂಧಿಸಿದ ಅಧಿಕಾರಿಗಳಿಗೆ ಅವಶ್ಯಕ ಸೂಚನೆಗಳನ್ನು ನೀಡಲಾಗುತ್ತಿದೆ. |
| | **ಮಹಾತ್ಮಗಾಂಧಿ ನರೇಗಾ ಯೋಜನೆಗೆ ಸಂಬಂಧಿಸಿದ ಮಾಹಿತಿ**<br><br>• ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕನಿಷ್ಠ 150-200 ಜನರಿಗೆ ಉದ್ಯೋಗ ಒದಗಿಸಲಾಗುತ್ತಿದೆ.<br><br>• ಸ್ವ-ಸಹಾಯ ಸಂಘಗಳ ಮೂಲಕ ಮಹಿಳಾ ಕಾಯಕ ಸಂಘಗಳ ರಚನೆ ಮಾಡಲಾಗುತ್ತಿದೆ. ಆ ಮೂಲಕ ಮಹಿಳೆಯರ ಸಬಲೀಕರಣ ಮತ್ತು ಸ್ವಾವಲಂಬನೆಗೆ ಪ್ರೇರಣೆ ನೀಡಲಾಗುತ್ತಿದೆ.<br><br>• 2023-24ನೇ ಸಾಲಿಗೆ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 10,726 ಹೊಸ ಜಾಬ್ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಅದರನ್ವಯ 21,936 ಫಲಾನುಭವಿಗಳಿಗೆ ಅನುಕೂಲವಾಗಿದೆ.<br><br>• 2023-24ನೇ ಸಾಲಿನಲ್ಲಿ 1.49 ಲಕ್ಷ ಅಕುಶಲ ಕೂಲಿ ಕಾರ್ಮಿಕರಿಗೆ ಉದ್ಯೋಗ ಒದಗಿಸಲಾಗಿದೆ.<br><br>• ಕೂಲಿ ಆಧಾರಿತ ವೈಯಕ್ತಿಕ ಕಾಮಗಾರಿಗಳಾದ ಕಂದಕ ಬದು, ಕೃಷಿ ಹೊಂಡ, ಬಸಿಗಾಲುವೆ ಮತ್ತು ಸಮುದಾಯ ಆಧಾರಿತ ಕಾಮಗಾರಿಗಳಾದ ಕೆರೆ ಅಭಿವೃದ್ಧಿ, ನಾಲಾ ಹೊಳೆತ್ತುವುದು, ಅಮೃತ ಸರೋವರ ನಿರ್ಮಾಣ ಮತ್ತು ಅರಣ್ಯ ಭೂಮಿಯಲ್ಲಿ ಟ್ರೆಂಚ್ ನಿರ್ಮಾಣ ಮಾಡುವ ಮೂಲಕ ಕೂಲಿಕಾರರಿಗೆ ಕೆಲಸ ನೀಡಲಾಗುತ್ತಿದೆ.<br><br>• ಮುಖ್ಯವಾಗಿ ಗ್ರಾಮೀಣ ಭಾಗದ ಭೂ ರಹಿತ |

| | |
|---|---|
| | ಸಣ್ಣ ಮತ್ತು ಅತೀ ಸಣ್ಣ ಕುಟುಂಬಗಳಿಗೆ ಕಡ್ಡಾಯವಾಗಿ ಉದ್ಯೋಗ ಚೀಟಿ ನೀಡಲಾಗುತ್ತಿದೆ ಅದರ ಜೊತೆಗೆ ಅವರಿಗೆ 100 ದಿನಗಳ ಕೆಲಸ ನೀಡುವ ಕಾರ್ಯ ಪ್ರಗತಿಯಲ್ಲಿದೆ. |
| ಆ)ಜಿಲ್ಲೆಯಾದ್ಯಂತ ಇದುವರೆಗೂ ಬರ ಪರಿಹಾರ ಕೋರಿ ಎಷ್ಟು ಹಣದ ಬೇಡಿಕೆ ಬಂದಿದೆ: ಬಂದಿದ್ದಲ್ಲಿ ಎಷ್ಟು ಅನುದಾನ ಒದಗಿಸಲಾಗಿದೆ: | ಆದೇಶ ಸಂಖ್ಯೆ:ಕಂಇ 513 ಟಿಎನ್ಆರ್ ರನ್ವಯ ವಿಜಯಪುರ ಜಿಲ್ಲೆಯ ಬರ ಪರಿಹಾರ ಕಾರ್ಯಗಳಿಗಾಗಿ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಗೆ ಒಟ್ಟು ರೂ. 18.00 ಕೋಟಿ ಅನುದಾನ ಬಿಡುಗಡೆಗೊಳಿಸಲಾಗಿರುತ್ತದೆ<br>ಜಿಲ್ಲಾಧಿಕಾರಿಗಳಪಿಡಿ ಖಾತೆಯಲ್ಲಿ ರೂ.33.70 ಕೋಟಿ ಹಾಗೂ ತಹಶೀಲ್ದಾರರ ಪಿ.ಡಿ. ಖಾತೆಯಲ್ಲಿ ರೂ.4.57 ಕೋಟಿ ಸೇರಿದಂತೆ ಒಟ್ಟು ರೂ. 38.27 ಕೋಟಿ ಬರ ನಿರ್ವಹಣೆಗಾಗಿ ಕುಡಿಯುವ ನೀರು ಮತ್ತು ಮೇವು ಪೂರೈಕೆಗಾಗಿ ಅನುದಾನ ಲಭ್ಯವಿರುತ್ತದೆ. |
| (ಇ)ಬಾಕಿ ಇರುವ ಅನುದಾನವನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಕೇಂದ್ರ ಸರ್ಕಾರದಿಂದ NDRF ಅನುದಾನವನ್ನು ನಿರೀಕ್ಷಿಸಿ ರಾಜ್ಯ ವಿಪತ್ತು ಪರಿಹಾರ ನಿಧಿ (SDRF) ಮಾರ್ಗಸೂಚಿಗಳ ಪ್ರಕಾರ ಬೆಳೆ ಹಾನಿ ಪರಿಹಾರದ ಮೊದಲನೇ ಕಂತಾಗಿ / ಬೆಳೆ ಹಾನಿ ಪರಿಹಾರವಾಗಿ ಅರ್ಹತೆಯ ಅನುಗುಣವಾಗಿ ಗರಿಷ್ಠ ರೂ.2,000/- ರವರೆಗೆ, ಗರಿಷ್ಠ 2 ಹೆಕ್ಟೇರಿಗೆ ಸೀಮಿತಗೊಳಿಸಿ ಅರ್ಹ ರೈತರಿಗೆ ಪಾವತಿಸಲಾಗುತ್ತಿದೆ.<br>ಬರ ನಿರ್ವಹಣೆ / ಬೆಳೆ ಹಾನಿ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದ SDRF ಮಾರ್ಗಸೂಚಿಯನುಸಾರ ರೂ.18171.44 ಕೋಟಿಗಳ ಆರ್ಥಿಕ ನೆರವನ್ನು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (NDRF) ರಡಿ ಕೋರಿ ಮೆಮೋರಾಂಡಂ ಸಲ್ಲಿಸಲಾಗಿದ್ದು, ಅನುದಾನವನ್ನು ನಿರೀಕ್ಷಿಸಲಾಗಿದೆ. |

ಕಡತ ಸಂಖ್ಯೆ: ಕಂಇ 64 ಟಿಎನ್ಆರ್ 2023

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು